ಅಸಲ ದಾವಾ ನಂ:549/2022
ಪಿ.ಡಬ್ಲು.3

**ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಈ ದಿನ ನ್ಯಾಯಾಲಯಕ್ಕೆ ಹಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳನ್ನಾಗಿ ಗುರುತಿಸಲಾಯಿತು.

ಸುಭಾಸ ರಾಮಚಂದ್ರ ಕಪ್ಪಲಗುದ್ದಿ ಹಾಗೂ ಪ್ರತಿವಾದಿಯರ ಮದ್ಯೆ ದಿನಾಂಕ 17.11.2017 ರಂದು ನೊಂದಣಿಗೊಂಡ ಬಿನ್ ಕಬ್ಜಾ ಖರೀದಿ ಕರಾರು ಪತ್ರವನ್ನು ನಾನೇ ಬರೆದು ದಸ್ತುರ ಹಾಕಿರುತ್ತೇನೆ. ಸದರಿ ದಾಖಲೆಯ ಡಿಜಿಟಲ್ ಪ್ರತಿಯನ್ನು ನಿಪಿ.21, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು. ಸುಭಾಸ ರಾಮಚಂದ್ರ ಕಪ್ಪಲಗುದ್ದಿ ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಬಿ) ಎಂದು ಹಾಗೂ ಪ್ರತಿವಾದಿ ಸಹಿಯನ್ನು ನಿಪಿ.21(ಸಿ) ಎಂದು ಗುರುತಿಸಲಾಯಿತು. ನಿಪಿ.21 ರ ರದ್ಧತಿ ಪತ್ರವನ್ನು ಸಹ ನಾನೇ ತಯಾರಿಸಿ, ದಸ್ತುರವನ್ನು ಹಾಕಿರುತ್ತೇನೆ. ಸದರಿ ಪತ್ರವನ್ನು ದಿ. 30.12.2019 ರಂದು ನೊಂದಣಿ ಮಾಡಲಾಗಿರುತ್ತದೆ. ಸದರಿ ಪತ್ರದ ಡಿಜಿಟಲ್ ಪ್ರತಿಯನ್ನು ನೋಡುತ್ತಿದ್ದು, ಅದನ್ನು ನಿಪಿ.22 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.22(ಎ) ಎಂದು ವಿಠ್ಠಲ ಸನದಿ ಇತನ ಸಹಿಯನ್ನು ನಿಪಿ.22(ಬಿ) ಎಂದು, ಪ್ರತಿವಾದಿಯ ಸಹಿಯನ್ನು ನಿಪಿ.22(ಸಿ) ಎಂದು ಗುರುತಿಸಲಾಯಿತು.

ಅಸಲ ದಾವಾ ನಂ:549/2022
ಪಿ.ಡಬ್ಲು.3

**<u>ಪಾಟೀಸವಾಲುಃ</u> ಪ್ರತಿವಾದಿಯರ ಪರ ಶ್ರೀ. ಆರ್ . ಬಿ. ಹೆಚ್ ವಕೀಲರಿಂದಃ-**

ನಾನು ಸನ್ 2010 ರಿಂದ ದಸ್ತುಬರಹಗಾರನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಸದರಿ ಪತ್ರಗಳನ್ನು ಬರೆದಿರುವ ಬಗ್ಗೆ ರಜಿಸ್ಟರನ್ನು ನಿರ್ವಹಿಸುತ್ತೇನೆಂದರೆ ನಿಜ. ಸದರಿ ರಜಿಸ್ಟರನಲ್ಲಿ ಪತ್ರ ಬರೆದಿರುವ ಬಗ್ಗೆ ಎರಡೂ ಪಕ್ಷಗಾರರ ಸಹಿಗಳನ್ನು ಪಡೆಯುತ್ತೇವೆ ಎಂದರೆ ನಿಜ. ದಿ.30.12.2019 ರಂದು ಬರೆದ ರದ್ಧತಿ ಪತ್ರ ಹಾಗೂ ಖರೀದಿ ಕರಾರು ಪತ್ರ ಗಳ ಬಗ್ಗೆ ರಜಿಸ್ಟರನಲ್ಲಿ ನಮೂದು ಮಾಡಿ ಇಬ್ಬರೂ ಪಕ್ಷಗಾರರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ರಜಿಸ್ಟರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

1 ನೇ ವಾದಿಯ ಗಂಡ ಸುಭಾಸ ಕಪ್ಪಲಗುದ್ದಿ ಸದರಿ ಮೇಲೆ ಹೇಳಿದ ಪತ್ರ ಬರೆಯುವಕ್ಕಿಂತ ಮುಂಚೆ 02 ವರ್ಷಗಳಿಂದ ಪರಿಚಯ ಇರುತ್ತಾನೆ. ಆತ ಒಕ್ಕಲುತನ ಮಾಡುತ್ತಿದ್ದ. ಅವರ ಮನೆ ಗೋಕಾಕ ಪಟ್ಟಣದ ಬಸವನಗರದಲ್ಲಿ ಇರುತ್ತದೆಂದರೆ ನನಗೆ ಗೊತ್ತಿಲ್ಲ. ವರ್ಷದಲ್ಲಿ ನಾನು ಸುಮಾರು 200-250 ದಸ್ತುಗಳನ್ನು ಬರೆಯುತ್ತೇನೆ.

ಮೂಡಲಗಿ ತಾಲ್ಲೂಕು ಆದಾಗಿನಿಂದ ವರ್ಷಕ್ಕೆ ಸುಮಾರು 100-150 ದಸ್ತುಗಳನ್ನು ಬರೆಯುತ್ತೇನೆ. ದಾವಾಸ್ತಿಯ ಸರ್ವೆ ನಂಬರ 190/1 ಇರುತ್ತದೆ. ಸದರಿ ಆಸ್ತಿಯ ಚಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ ಆದರೆ ಪತ್ರವನ್ನು ನೋಡಿ ಹೇಳಬಹುದು. ದಾವಾಸ್ತಿಯ ಬಗ್ಗೆ ಪತ್ರವನ್ನು ಬರೆಯಲು ಸದರಿ ಸುಭಾಸ ಕಪ್ಪಲಗುದ್ದಿ ಮೊದಲ ಬಾರಿಗೆ 2017 ರಲ್ಲಿ ನನಗೆ ಮೊದಲ ಬಾರಿಗೆ ಭೆಟ್ಟಿಯಾಗಿರುತ್ತಾನೆ. ಸದರಿ ದಾವಾಸ್ತಿಯ ಕುರಿತು ಪತ್ರವನ್ನು ಮಾಡಲು ಆತ ನನಗೆ

3-4 ಬಾರಿ ಭೇಟ್ಟಿಯಾಗಿದ್ದ. 2 ನೇ ಬಾರಿಗೆ ದಾವಾಸ್ತಿಯ ಕುರಿತು ದಿ.30.12.2019 ರಂದು ಖರೀದಿ ಕರಾರು ಪತ್ರ ಮಾಡಲಾಗಿರುತ್ತದೆ. ಆದ ಸುಭಾಸ ಕಪ್ಪಲಗುದ್ದಿ ಇತನು ಬೆಳಗ್ಗೆ 10-00- 10.30 ಗಂಟೆ ಸಮಯದಲ್ಲಿ ನಮ್ಮ ಕಚೇರಿಗೆ ಬಂದಿದ್ದ. ಆತನ ಜೊತೆ ಪ್ರತಿವಾದಿ ಸಹ ಬಂದಿದ್ದ. ಅವರೊಂದಿಗೆ ಇನ್ನೂ 5-6 ಜನರು ಬಂದ್ದಿದ್ದರು. ಅವರ ಹೆಸರುಗಳು ಈಗ ನನಗೆ ನೆನಪಿಲ್ಲ. ಆ ಪೈಕಿ ಖರೀದಿ ಕರಾರು ರದ್ಧತಿ ಪತ್ರಕ್ಕೆ ಹಾಗೂ ಖರೀದಿ ಕರಾರು ಪತ್ರಕ್ಕೆ 3-4 ಜನ ಸಹಿ ಮಾಡಿರುತ್ತಾರೆ. ದ ಸದರಿ ದಿನ ಎಷ್ಟು ಗಂಟೆಗಳ ಕಾಲ ವ್ಯವಹಾರದ ಬಗ್ಗೆ ಮಾತನಾಡಿಕೊಂಡಿರುತ್ತಾರೆಂದರೆ ಮುಂಚಿತವಾಗಿ ವ್ಯವಹಾರ ಮಾತನಾಡಿಕೊಂಡು ಬಂದಿದ್ದು, ಸದರಿ ದಿನ ಕೇವಲ ಅರ್ಧ ಗಂಟೆಯಲ್ಲಿ ವ್ಯವಹಾರ ಮುಗಿಸಿರುತ್ತಾರೆ. 2 ನೇ ಬಾರಿಗೆ ಅಂದರೆ ದಿ.30.12.2019 ರಂದು ಖರೀದಿ ಕರಾರು ಪತ್ರ ಮಾಡುವಾಗ ದಾವಾಸ್ತಿಯ ಉತಾರನ್ನು ನೋಡಿರುತ್ತೇನೆ.

ಸುಭಾಸ ಕಪ್ಪಲಗುದ್ದಿ ಇತನು ಸಿವಿಲ್ ಕಾಂಟ್ರ್ಯಾಕ್ಟರ ಅಂತಾ ಕೆಲಸ ಮಾಡುತ್ತಿದ್ದು, ಆತ ಒಕ್ಕಲುತನ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಗಳು ದಸ್ತನ್ನು ಬರೆಸಲು ಬಂದಾಗ ಅವರ ವೃತ್ತಿಯ ಬಗ್ಗೆ ಕೇಳಿ ತಿಳಿದುಕೊಳ್ಳುತ್ತೇವೆ. ಸಾಕ್ಷಿ ಮುಂದುವರೆದು ಅವರು ಜಮೀನನ್ನು ಹೊಂದಿದ್ದರೆ ಅವರ ಉದ್ಯೋಗ ಒಕ್ಕಲುತನ ಎಂದು ದಸ್ತು ನಲ್ಲಿ ಬರೆಯುತ್ತೇವೆ. 2 ನೇ ಬಾರಿಗೆ ದಸ್ತನ್ನು ಬರೆಸಲು ಬಂದಾಗ 1 ನೇ ವಾದಿಯ ಗಂಡ ಸುಭಾಸ ಕಪ್ಪಲಗುದ್ದಿ ಸಿವಿಲ್ ಕಾಂಟ್ರ್ಯಾಕ್ಟರ ಕೆಲಸ ಮಾಡುತ್ತಿದ್ದು, ಹಾಗೂ ಪ್ರತಿವಾದಿ ಒಕ್ಕಲುತನ ಉದ್ಯೋಗ ಮಾಡುತ್ತಿದ್ದು, ಸದರಿ ಸುಭಾಸ ಕಪ್ಪಲುಗದ್ದಿ ಹೇಳಿಕೆಯ ಮೇರೇಗೆ ನಿಪಿ.5 ನ್ನು ತಯಾರಿಸಿರುತ್ತೇನೆಂದರೆ ಸರಿಯಲ್ಲ.

ದಾವಾಸ್ತಿಗೆ ಸಂಬಂಧಿಸಿದಂತೆ ಮೊದಲನೇ ಖರೀದಿ ಕರಾರು ಪತ್ರವನ್ನು ಬರೆದ ದಿನಾಂಕ ಹೇಳಬಲ್ಲೀರಾ? ಎಂದರೆ ಸಾಕ್ಷಿಯು ಸನ್ 2017 ರಲ್ಲಿ ಬರೆದಿದ್ದು, ನಿಖರವಾದ ದಿನಾಂಕವನ್ನು ದಸ್ತನ್ನು ನೋಡಿ ಹೇಳಬಹುದು. ಸದರಿ ಪತ್ರದಲ್ಲಿ ಒಂದು ವರ್ಷದ ಅವಧಿ ನಿಗದಿಪಡಿಸಲಾಗಿತ್ತು. ಸದರಿ ಪತ್ರವನ್ನು ಬರೆದ 02 ವರ್ಷಗಳ ನಂತರ 2 ನೇ ಬಾರಿಗೆ ಖರೀದಿ ಕರಾರು ಪತ್ರವನ್ನು ಬರೆಯಲಾಗಿರುತ್ತದೆಂದರೆ ನಿಜ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ತಯಾರಿಸುವ ಕಾಲಕ್ಕೆ ಸದರಿ ಖರೀದಿ ಕರಾರು ಪತ್ರಗಳನ್ನು ನೋಡಿರುತ್ತೇನೆ. ಸದರಿ ಸುಭಾಸ ಕಪ್ಪಲಗುದ್ದಿ ಇವರ ಮಗಳು ಅಂದರೆ 2ನೇ ವಾದಿ ಲಾವಣ್ಯ ಇವಳು ಈ ಪ್ರಕರಣದಲ್ಲಿ ಏನು ಸಾಕ್ಷ್ಯ ನುಡಿದಿರುತ್ತಾಳೆಂದು ನನಗೆ ಗೊತ್ತಿಲ್ಲ. ಸುಭಾಸ ಕಪ್ಪಲಗುದ್ದಿ ಇವರು 1ನೇ ಪ್ರತಿವಾದಿಗೆ ರೂ.10,31,000/- ಗಳನ್ನು ನನ್ನ ಸಮಕ್ಷಮ ಕೊಟ್ಟಿದ್ದು, ಆ ಬಗ್ಗೆ ಅವರು ಹಣವನ್ನು ಏಣಿಕೆ ಮಾಡಿಕೊಂಡಿರುತ್ತಾರೆ. ನಿಪಿ.5 ರಲ್ಲಿ ದಾವಾಸ್ತಿಯ ಕಿಮ್ಮತ್ತು 16 ಲಕ್ಷ ಎಂದು, ಮುಂಗಡ ಹಣ ರೂ. 15,31,000/- ಎಂದು ತೋರಿಸಿದ್ದು ಸರಿ ಇರುತ್ತದೆ. ನಾನು ಹೇಳುವಂತೆ ಸದರಿ ದಿನ ರೂ.10,31,000/-ಗಳನ್ನು ಮಾತ್ರ ಕೊಟ್ಟಿರುತ್ತಾರೆಂದು ನುಡಿದಿದ್ದು, ಇನ್ನೂ 05 ಲಕ್ಷ ರೂ. ಬಾಕಿ ಕೊಡಬೇಕಾಗಿತ್ತು ಎಂದರೆ ಸಾಕ್ಷಿಯು ಸದರಿ 05 ಲಕ್ಷ ಹಣವನ್ನು ಮೊದಲ ಬಾರಿಗೆ ಮಾಡಿದ ಖರೀದಿ ಕರಾರು ಪತ್ರದ ಕಾಲಕ್ಕೆ ಕೊಟ್ಟಿದ್ದು, ಅದನ್ನು ನಿಪಿ.5 ರಂತೆ ಪತ್ರ ಬರೆಯುವಾಗ ಲೆಕ್ಕಕ್ಕೆ ತೆಗೆದುಕೊಂಡಿರುತ್ತಾರೆ. ಸದರಿ ಸಂಗತಿಯನ್ನು ನಿಪಿ.5 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ನಿಜ. ನಿಪಿ.5 ಕ್ಕೆ ಪುರವಣಿ ಪತ್ರವನ್ನು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಪಕ್ಷಗಾರರು ಪ್ರತ್ಯೇಕವಾಗಿ ಬೇರೆ ಪತ್ರವನ್ನು ಬರೆಯಲು ಹೇಳಿದ್ದರಿಂದ ನಿಪಿ.5 ರಂತೆ ಹೊತ ಖರೀದಿ ಕರಾರು ಪತ್ರವನ್ನು ಬರೆದಿರುತ್ತೇನೆ. ಸದರಿ ನಿಪಿ.5 ನ್ನು ಬರೆಯಲು ಸುಭಾಸ ಕಪ್ಪಲಗುದ್ದಿ

ಹಾಗೂ ಪ್ರತಿವಾದಿ ಇಬ್ಬರೂ ಹೇಳಿರುತ್ತಾರೆ. ನಾನು ನಿಪಿ.5 ನ್ನು ಕೇವಲ ಸುಭಾಸ ಕಪ್ಪಲಗುದ್ದಿ ಹೇಳಿಕೆಯ ಮೇರೇಗೆ ಮಾತ್ರ ಬರೆದಿದ್ದು, ಅದಕ್ಕೆ ಪ್ರತಿವಾದಿಯು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಮೇಲೆ ಹೇಳಿದಂತೆ ಮೊದಲನೇಯ ಖರೀದಿ ಕರಾರು ಪತ್ರಕ್ಕೆ ಪುರವಣಿ ಪತ್ರವನ್ನು ಬರೆದಿದ್ದರೆ 1ನೇ ಪ್ರತಿವಾದಿಯು ಸದರಿ ಪತ್ರವನ್ನು ಬೇರೆಯವರಿಗೆ ತೋರಿಸಿದರೆ ತಾನು ಮೊದಲನೇ ಖರೀದಿ ಕರಾರು ಪತ್ರದಂತೆ 05 ಲಕ್ಷ ರೂ. ಹಣವನ್ನು ಮರಳಿ ಕೊಟ್ಟಿದ್ದರೂ, ರೂ.16 ಲಕ್ಷಕ್ಕೆ ಪುರವಣಿ ಪತ್ರ ಬರೆಸಿಕೊಂಡಿರುತ್ತಾನೆಂದು ಗೊತ್ತಾಗುತ್ತದೆಂಬ ಉದ್ದೇಶದಿಂದ ನಿಪಿ.5 ರಂತೆ ಹೊಸ ಖರೀದಿ ಕರಾರು ಪತ್ರವನ್ನು ಸುಭಾಸ ಕಪ್ಪಲಗುದ್ದಿ ಹೇಳಿಕೆಯ ಮೇರೇಗೆ ತಯಾರಿಸಿರುತ್ತೇನೆಂದರೆ ಸರಿಯಲ್ಲ. ಉಪನೊಂದಣಿ ಕಚೇರಿಯಲ್ಲಿ ಸನ್ 2017 ರಲ್ಲಿ ಬರೆದುಕೊಟ್ಟ ಖರೀದಿ ಕರಾರು ಪತ್ರವನ್ನು ರದ್ಧತಿ ಮಾಡುತ್ತೇನೆಂದು ಹೇಳಿ ನಿಪಿ.5 ರಂತೆ ಹೊಸ ಖರೀದಿ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಈಗ ನೋಡುತ್ತಿರುವ ಬಿನ್ ಕಬ್ಜಾ ಖರೀದಿ ರದ್ಧತಿ ಪತ್ರವನ್ನು ನಾನೇ ತಯಾರಿಸಿರುತ್ತೇನೆ. ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ಪತ್ರವನ್ನು ಸಂಜೆ 4.13 ಗಂಟೆಗೆ ನೊಂದಣಿ ಕಚೇರಿಯಲ್ಲಿ ನೊಂದಣಿಗೊಂಡಿರುತ್ತದೆಂದರೆ ನಿಜ.

ಈಗ ನೋಡುತ್ತಿರುವ ನಿಪಿ.5 ಬಿನ್ ಕಬ್ಜಾ ಖರೀದಿ ಕರಾರು ಪತ್ರವು ಸಂಜೆ 4.26 ಗಂಟೆಗೆ ನೊಂದಣಿಗೊಂಡಿರುತ್ತದೆಂದರೆ ನಿಜ. ನಿಡಿ1 ಮತ್ತು ನಿಪಿ.5 ಕ್ಕೆ 13 ನಿಮಿಷಗಳ ಅಂತರ ಇರುತ್ತದೆಂದರೆ ನಿಜ.

ದಿ.30.12.2019 ರಂದು ಪ್ರತಿವಾದಿಯ ಜೊತೆ ಆತನ 03 ಮಕ್ಕಳು ಆತನ ಜೊತೆಗೆ ಬಂದಿದ್ದರು. ಸದರೀಯವರ ಸಹಿಗಳನ್ನು ನಿಪಿ.5 ಕ್ಕೆ ಒಪ್ಪಿಗೆ ಸಾಕ್ಷಿಯನ್ನಾಗಿ ಅವರ ಭಾವಚಿತ್ರವನ್ನು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಖರೀದಿ ಪತ್ರದ ಕಾಲಕ್ಕೆ ಮಾಡುತ್ತೇನೆಂದು ಹೇಳಿ ಒಪ್ಪಿಗೆ ಸಾಕ್ಷಿಯಾಗಿ ಮಾತ್ರ ಸಹಿ ಹಾಕಿರುತ್ತಾರೆ. ನಿಡಿ1 ರಲ್ಲಿ ಹೊಸ ಖರೀದಿ ಕರಾರು ಪತ್ರವನ್ನು ಮಾಡಿಸುವ ಸಲುವಾಗಿ ಅದನ್ನು ರದ್ಧತಿ ಮಾಡುತ್ತೇವೆ ಎಂದು ಬರೆಸಿರುವುದಿಲ್ಲ ಎಂದರೆ ನಿಜ. ನಿಡಿ1 ರಲ್ಲಿ 1 ನೇಪ್ರತಿವಾದಿಯ ಸಹಿಗಳನ್ನು ಪಡೆದಿರುವುದಿಲ್ಲ ಎಂದರೆ ನಿಜ. ನಿಡಿ.1 ರಂತೆ ರದ್ಧತಿ ಪತ್ರವನ್ನು ಮಾಡಿಸುವ ಕಾಲಕ್ಕೆ 1 ನೇ ಪ್ರತಿವಾದಿಯ ಮಕ್ಕಳು ಸಹ ಇದ್ದರು. ಸದರಿ ಪತ್ರಕ್ಕೆ ಅವರ ಸಹಿಗಳನ್ನು ಪಡೆಯಲು ತೊಂದರೆ ಇರಲಿಲ್ಲ. ನಿಪಿ5 ರಂತೆ ಪತ್ರವನ್ನು ಬರೆಯುವ ಕಾಲಕ್ಕೆ 2 ರಿಂದ 4 ನೇ ಪ್ರತಿವಾದಿಯರು ನನ್ನ ಕಚೇರಿಗೆ ಬಂದಿರಲಿಲ್ಲ, ಸದರೀರವರ ಸಹಿಗಳು ಮತ್ತು ಹೆಬ್ಬೆಟ್ಟನ್ನು ಸುಭಾಸ ಕಪ್ಪಲಗುದ್ದಿಯೇ ಖೊಟ್ಟಿಯಾಗಿ ಮಾಡಿರುತ್ತಾನೆಂದರೆ ಸರಿಯಲ್ಲ. ನಿಪಿ.5 ನೊಂದಣಿಗೊಂಡ ನಂತರ ಭಾವಚಿತ್ರದ ಎದುರಿಗೆ ಸಹಿಗಳನ್ನು ಮಾಡುವಾಗ ನಾನು ಹಾಜರು ಇರಲಿಲ್ಲ. ನಾನು ಸುಭಾಸ ಕಪ್ಪಲಗದ್ದಿ ಹಾಗೂ ಪ್ರತಿವಾದಿಯಿಂದ ಪಡೆದ ಶುಲ್ಕವನ್ನು ಪಡೆದ ಬಗ್ಗೆ ರಸೀದಿ ನೀಡಿರುತ್ತೇನೆ. ಸದರಿ ರಸೀದಿಯ ಪ್ರತಿಯನ್ನು ಇಟ್ಟುಕೊಂಡಿರುತ್ತೇವೆ. ಅದನ್ನು ಹಾಜರುಪಡಿಸಲು ತೊಂದರೆ ಇರುತ್ತದೆಯಾ? ಎಂದರೆ ಸಾಕ್ಷಿಯು ಈಗ ಅದು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮೊದಲನೇಯ ಖರೀದಿ ಕರಾರು ಪತ್ರವನ್ನು 1 ನೇ ಪ್ರತಿವಾದಿ ರೂ.5 ಲಕ್ಷ ಹಣವನ್ನು ಸುಭಾಸ ಕಪ್ಪಲಗುದ್ದಿ ಇವರಿಗೆ ಕೊಟ್ಟ ನಂತರ ರದ್ಧತಿ ಮಾಡಿಕೊಂಡಿರುತ್ತಾನೆಂದರೆ ಸಾಕ್ಷಿಯು ಹೌದು ಎಂದು ನುಡಿದು, ನಂತರ ಹೊಸ ಖರೀದಿ ಕರಾರು ಪತ್ರದಲ್ಲಿ ಸದರಿ ಹಣವನ್ನು ಹೊಂದಾಣಿಕೆ ಮಾಡುವುದಾಗಿ ಹೇಳಿರುತ್ತಾನೆ. 1 ನೇ ಪ್ರತಿವಾದಿಗೆ ಮೊಸ ಮಾಡುವ ಉದ್ದೇಶದಿಂದ ನಾನು ಸುಭಾಸ ಕಪ್ಪಲಗುದ್ದಿ ಇತನೊಂದಿಗೆ

ಮಿಲಾಪಿಯಾಗಿ ನಿಪಿ5 ರಂತೆ ರೂ.16 ಲಕ್ಷ ಗಳಿಗೆ ಹಳೆಯ ಕರಾರು ಪತ್ರವನ್ನು ರದ್ಧತಿ ಮಾಡುತ್ತೇನೆಂದು ಹೇಳಿ ಹೊಸ ಖರೀದಿ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿದ್ದೇನೆಂದರೆ ಸರಿಯಲ್ಲ. ನಿಪಿ5 ರಂತೆ ಕರಾರುಪತ್ರವನ್ನು ಮಾಡಿಕೊಳ್ಳುವ ಕಾಲಕ್ಕೆ ಸುಭಾಸ ಕಪ್ಪಲಗುದ್ದಿ ಇತನು 1 ನೇ ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿರದೇ ಇದ್ದರೂ ಸಹ ಆತನ ಕುಟುಂಬದವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರಿಗೆ ಅನುಕೂಲ ಮಾಡಲು ಸುಳ್ಳು ಸಂಗತಿಗಳುಳ್ಳ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ